

ಡಾ.ವಿನೋದ ಛೆಬ್ಬಿ

ಕಾಮಕೂಟದಲ್ಲಿ ಹೆಣ್ಣಿನ ಶರೀರದಿಂದ ಹೆಣ್ಣಿಗಿಂತ ಗಂಡಿಗೇ ಹೆಚ್ಚು ತೃಪ್ತಿಯಾಗುತ್ತದೆ!

# 224:ಅನ್ಯೋನ್ಯತೆಗೆ ಹುಡುಕಾಟ-3

ಶಾಮಾ–ಸಲೀಲ್ ದಂಪತಿಯಲ್ಲಿ ಕಾಮಾಸಕ್ತಿ ಕಡಿಮೆ ಆಗುತ್ತಿದೆ. ಶಾಮಾ ತನ್ನ ಕಲ್ಪನಾ ವಿಲಾಸ ಹಾಗೂ ತಪ್ಪಿತಸ್ಥ ಭಾವದಿಂದ ದೂರವಾಗುತ್ತಿದ್ದರೆ, ತನ್ನ ಶಾರೀರಿಕ ದೌರ್ಬಲ್ಯದ ಕಾರಣದಿಂದ ಶಾಮಾ ನಿರಾಕರಿಸಬಹುದು ಎಂಬ ಯೋಚನೆ ಸಲೀಲನಲ್ಲಿದೆ. ಇಬ್ಬರೂ ಪರಸ್ಪರರ ಬಗೆಗೆ ಗಮನ ಕೊಡುತ್ತ ಸ್ವಂತ ಕಾಮಾಸಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಸಂಗಾತಿಯ ಸಾನ್ನಿಧ್ಯದಲ್ಲಿ ನಿರಾಕರಣೆಯ ಮುಖದಲ್ಲೂ ಸ್ವಂತಿಕೆಯನ್ನು ಪ್ರಕಟಿಸುವ ಸವಾಲನ್ನು ಎಷ್ಟರ ಮಟ್ಟಿಗೆ ಎದುರಿಸುತ್ತಿದ್ದಾರೆ ಎಂದು ನೋಡೋಣ.

ತನ್ನ ಜನನಾಂಗ ಸ್ವಚ್ಛವಿಲ್ಲ ಎನ್ನುವ ಶಾಮಾಳ ಅನಿಸಿಕೆಗೆ ಬರೋಣ. ಜನನಾಂಗದ ಬಗೆಗಿನ ಈ ಭಾವ ಎಲ್ಲಿಂದ ಬಂತು? ಆಕೆಯ ಮೂಲ ಕುಟುಂಬದಲ್ಲಿ ಮುಟ್ಟಾದ ಹೆಂಗಸನ್ನು ಅಷ್ಟೇನೂ ಗೌರವದಿಂದ ಕಾಣುತ್ತಿರಲಿಲ್ಲ. ಹಾಗಾಗಿ ಆ ದಿನಗಳಲ್ಲಿ ತನ್ನ ಬಗೆಗಲ್ಲದೆ ಇತರರ ಬಗೆಗೂ ಕಿರಿಕಿರಿ ಆಗುತ್ತಿತ್ತು. ಕಾಲೇಜಿನಲ್ಲಿ ಗೆಳೆಯ ಗೆಳತಿಯರ ಜೊತೆಗೆ ಬೆರೆತು ಲೈಂಗಿಕತೆಯ ಬಗೆಗೆ ಮುಕ್ತವಾಗಿ ಮಾತಾಡುವಾಗ ಒಂದು ಕಲ್ಪನೆ ಕಾಣಿಸಿಕೊಳ್ಳುತ್ತಿತ್ತು: ಆಕೆ ಏನೂ ಧರಿಸದೆ ಹಾಸಿಗೆಯಲ್ಲಿ ಇರುತ್ತಾಳೆ. ಆಗ ಅಪರಿಚಿತ ಗಂಡು ತನ್ನ ಶರೀರದ ಮೇಲೆ ಅಧಿಕಾರ ನಡೆಸಲು ಬರುತ್ತಾನೆ. ತನ್ನನ್ನು ಅವನಿಗೆ ಒಪ್ಪಿಸಿಕೊಳ್ಳುತ್ತಾಳೆ. ಆಗಿನಿಂದ ಆಕೆಗೆ ಆಗಾಗ ಏಕಾಂತದಲ್ಲಿ ಬೆತ್ತಲೆ ಇರಬೇಕೆಂಬ ಬಯಕೆ ಆಗುತ್ತಿದೆ.

ಬೆತ್ತಲೆತನದ ಬಗೆಗೆ ಒಂದು ಮಾತು: ಬೆತ್ತಲೆತನವು 'ನಾನು ಹೇಗಿದ್ದೇನೋ ಹಾಗೆಯೇ ಕಾಣಿಸಿಕೊಳ್ಳಬೇಕು' ಎನ್ನುವ, ತನ್ನತನವನ್ನು ಇರುವಂತೆಯೇ ತೆರೆದು ತೋರಿಸುತ್ತ ಮನೋಜ್ಞವಾಗಿ ಅನುಭವಿಸುವ ಅತ್ಯಂತ ಸಹಜವಾದ ಸ್ಥಿತಿ. ಪ್ರತಿಯೊಬ್ಬರಲ್ಲೂ ಬೆತ್ತಲೆ ಇರಬೇಕೆಂಬ ಅದಮ್ಯ ಬಯಕೆ ಇರುತ್ತದೆ. ಅನೇಕರು ಏಕಾಂತದಲ್ಲಿ ಹೀಗಿರುತ್ತಾರೆ ಕೂಡ. ಆದರೆ ಶಾಮಾ ಬೆತ್ತಲಾಗುವುದರಲ್ಲಿ ಒಂದು ವೈಚಿತ್ರ್ಯವಿದೆ. ಕಾಮಕ್ರಿಯೆಯ ಹೊರತಾಗಿ ಉಳಿದಂತೆ ಸಲೀಲನೊಡನೆ ಬೆತ್ತಲೆತನವನ್ನು ಹಂಚಿಕೊಳ್ಳಲು ಇಷ್ಟವಿಲ್ಲ. ನಗ್ನತೆಯಿಂದ ಅವನನ್ನು ಆಕರ್ಷಿಸಲು ಒಲ್ಲಳು. 'ನನ್ನ ಮೈಯನ್ನು ನೀನು ಬಯಸಿದರೆ ಮಾತ್ರ ತೋರಿಸುತ್ತೇನೆ, ನನಗಾಗಿ ಅಲ್ಲ' ಎಂದಂತೆ. ಒಂದುಕಡೆ ನಗ್ನತೆಯನ್ನು ಬಯಸುವುದು, ಇನ್ನೊಂದು ಕಡೆ ಅದನ್ನು ಸಂಗಾತಿಯೊಡನೆ ಹಂಚಿಕೊಳ್ಳಲು ಹಿಂಜರಿಯುವುದು — ಇದು ತನ್ನ ಬಯಕೆಗೆ ನಿಷ್ಠೆ ಇಲ್ಲದೆ ಇರುವುದನ್ನು ತೋರಿಸುತ್ತದೆ. ಆಕೆ 'ಸಮಗ್ರ' ಆಗುವುದನ್ನು ತಡೆಯುತ್ತದೆ. ಸಮಗ್ರತೆ ಅಂದರೇನು? ತನ್ನ ಶರೀರವನ್ನು ತನ್ನ ಬಯಕೆಯೊಡನೆ ಮೇಳೈಸುವುದು — ಹಾಡಿನ ಜೊತೆ ಸಂಗೀತವನ್ನು ಜೋಡಿಸಿದಂತೆ. ಇಲ್ಲಿ ತಾನೇನು ಆಗಬೇಕೆಂದು (ಬೆತ್ತಲೆ) ಬಯಸುತ್ತೇನೆ, ಹಾಗೂ ತನ್ನ ಬಗೆಗೆ ಏನು ಅಂದುಕೊಂಡಿದ್ದೇನೆ (ಸಂಗಾತಿಯ ಮುಂದೆ ಬೆತ್ತಲೆ ಬೇಡ) ಎನ್ನುವುದರಲ್ಲಿ ಮೇಳವಿಲ್ಲದೆ ಅಸಮಗ್ರತೆ ಇದೆ. ಹಾಗೆಯೇ ಮುಖಮೈಥುನದಲ್ಲಿ ಶಿಶ್ನದ ದ್ರವವನ್ನು ಒಪ್ಪಿಕೊಳ್ಳುವವಳು ಯೋನಿದ್ರವಕ್ಕೆ ಬೇಡ ಎನ್ನುವುದು ಅಸಮಗ್ರತೆಯ ಸಂಕೇತ. ಇರುವ ತನ್ನದೆಲ್ಲವನ್ನೂ ಇಡಿಯಾಗಿ ನಿರಾಳತೆಯಿಂದ ಒಪ್ಪಿಕೊಳ್ಳುವುದಕ್ಕೆ ಹಿಂಜರಿಯುತ್ತಾಳೆ. ಇದರರ್ಥ ಏನು? ಗಂಡಿನ ಶಿಶ್ನವು ಸ್ವಚ್ಛ, ತನ್ನ ಯೋನಿಯು ಕೊಳಕು ಎನ್ನುವುದು ಜನನಾಂಗದ ವಿಷಯವಲ್ಲ, ತನ್ನನ್ನು ತಾನೇ ಒಪ್ಪಿಕೊಳ್ಳದಿರುವ ವಿಷಯ. ಇದು ಸ್ವಚ್ಛತೆಗೆ ಸಂಬಂಧಿಸಿಲ್ಲ, ಸಮಗ್ರತೆಗೆ ಸಂಬಂಧಿಸಿದೆ.

ಇದಕ್ಕೆ ಪೂರಕವಾಗಿ ಇನ್ನೊಂದು ಅಂಶವೂ ಇದೆ. ಗಂಡುಹೆಣ್ಣುಗಳ ನಡುವಿನ ಬಹುತೇಕ ಎಲ್ಲ ಕಾಮಕೂಟಗಳಲ್ಲೂ ಗಂಡಿಗೆ ತೃಪ್ತಿ ಆಗುತ್ತದೆ. ಆದರೆ ಹೆಣ್ಣಿಗೆ ಪ್ರತಿ ಕೂಟದಲ್ಲಿ ತೃಪ್ತಿ ಆಗಲಿಕ್ಕಿಲ್ಲ. ಇದರರ್ಥ ಏನೆಂದರೆ, ಹೆಣ್ಣಿನ ಶರೀರದಿಂದ ಹೆಣ್ಣಿಗಿಂತ ಗಂಡಿಗೇ ಹೆಚ್ಚು ತೃಪ್ತಿ ಸಿಗುತ್ತದೆ! (ಇದನ್ನು ಮನವರಿಕೆ ಮಾಡಿಕೊಳ್ಳಲು ಇದಕ್ಕೆ ವಿರುದ್ಧವಾಗಿ ಕಲ್ಪಿಸಿಕೊಳ್ಳಿ: ಕೂಟದಲ್ಲಿ ಗಂಡು ಇನ್ನೂ ತೃಪ್ತಿಯನ್ನು ಹುಡುಕುತ್ತಿರುವಾಗಲೇ ಹೆಣ್ಣು ಆತನ ಶಿಶ್ನವನ್ನು ಉಪಯೋಗಿಸಿ ತೃಪ್ತಿಹೊಂದಿ ಅವನಿಂದ 'ಕಳಚಿ'ಕೊಂಡರೆ ಹೇಗಿರುತ್ತದೆ?) ಶಾಮಾ ತನ್ನ ಶರೀರದ ಮೂಲಕ ಸುಖ ಪಡೆಯುವುದಕ್ಕಿಂತ ಹೆಚ್ಚು ಸುಖವನ್ನು ಸಲೀಲ್ ಅವಳ ಶರೀರದಿಂದ ಪಡೆಯುತ್ತಿದ್ದಾನೆ. ಕೆಲವೊಮ್ಮೆ ತನಗೆ ತೃಪ್ತಿ ಆಗದಿದ್ದರೂ ಅವನಿಗೆ ತೃಪ್ತಿ ಆಗುತ್ತಿರುವುದು ಅವಳಿಗೆ ಅಸಹನೆ ತರುತ್ತಿದೆ. ಇದಕ್ಕಿಂತ ಮಿಗಿಲಾಗಿ, ಆಕೆ ಸಲೀಲನಿಗೆ ಅಷ್ಟೇ ಅಲ್ಲ, ಯಾವುದೇ ಗಂಡಿಗೂ (ಒಂದು ಹೆಣ್ಣಿನಂತೆ) ಅರ್ಹಳಲ್ಲ ಎನ್ನುವ ಕೀಳುಭಾವ ಅವಳಲ್ಲಿದೆ. (ಹೀಗೆ ಸ್ವಂತ ಶರೀರದ ಬಗೆಗೆ ಕೀಳುಭಾವ ಹೊಂದಿರುವ ಹೆಂಗಸರು ನಮ್ಮಲ್ಲಿ ಸಾಕಷ್ಟಿದ್ದಾರೆ. ಉದಾಹರಣೆಗೆ, ಮಗು ಬೇಕೆಂದು ಸಂಭೋಗಕ್ಕೆ ತಯಾರಿ ನಡೆಸುವಾಗ ನೆರವೇರದೆ ಬಹಳಷ್ಟು ದಂಪತಿಗಳು ನನ್ನಲ್ಲಿ ಬಂದಿದ್ದಾರೆ. ಅವರಲ್ಲಿ ಹೆಂಡತಿಗೆ ಒಂದು ಪ್ರಶ್ನೆ ಕೇಳುತ್ತೇನೆ: 'ಗಂಡ ನಿಮ್ಮ ಮೇಲೆ ಬಂದು ಯತ್ನಿಸುತ್ತಿರುವಾಗ ಕೆಳಗಿರುವ ನಿಮಗೆ ಹೇಗೆ ಅನ್ನಿಸುತ್ತದೆ?' ಹೆಂಡಂದಿರ ಉತ್ತರ ಸಾರ್ವತ್ರಿಕವಾಗಿದೆ: 'ಸಂಭೋಗ, ಗರ್ಭಧಾರಣೆ ಎನ್ನುವ ಹಿಂಸೆ ನಿಂತರೆ ಸಾಕು ಎಂದು ಕಾಯುತ್ತ ಇರುತ್ತೇನೆ!' ಸಂಭೋಗದ ಸುಖವನ್ನು ಅನುಭವಿಸದೆ ಇರುವವರು ತಮ್ಮ ಶರೀರಕ್ಕೆ ಯಾವ ಮಟ್ಟಿನ ಅನರ್ಹತೆಯನ್ನು ದಯಪಾಲಿಸಿದ್ದಾರೆ ಎನ್ನುವುದು ಯಾರ ಊಹೆಗೂ ನಿಲುಕುವ ಮಾತು. ಅದಕ್ಕೆಂದೇ ತಮ್ಮ ಶರೀರವನ್ನು ಮಕ್ಕಳನ್ನು ಹೆರುವುದಕ್ಕೆ ಉಪಯೋಗಿಸಿಕೊಳ್ಳುವ ಉಪಾಯ ಮಾಡುತ್ತ ಸ್ವಯಂ ದೂಷಣೆಯಿಂದ ಪಾರಾಗುತ್ತಾರೆ.) ಹೀಗೆ ತನಗೇ ಸುಖ ಸಿಗದಿರುವಾಗ ತನ್ನಿಂದ ಇತರರು ಸುಖ ಪಡೆಯುತ್ತಿರುವುದು ಶಾಮಾಳಿಗೆ ಹೊಸ ಸಂಗತಿ ಏನಲ್ಲ. ಇತರರು ತನ್ನ ಉಪಯೋಗ ಪಡೆಯುತ್ತಿದ್ದರೂ ತಾನೇ ತನ್ನ ಉಪಯೋಗ ಪಡೆದುಕೊಳ್ಳುತ್ತಿಲ್ಲ ಎನ್ನುವುದು ಆಗಾಗ ಚುಚ್ಚುತ್ತ, ತನ್ನ ಬಗೆಗೂ ಇತರರ ಬಗೆಗೂ ಸಿಟ್ಟಿದೆ. ಒಟ್ಟಾರೆ ಕಾಮಕೂಟದಲ್ಲಿ ಹಾಗೂ ಅದರ ಹೊರಗೆ ಆಕೆಯದು ಒಂದೇ ಕತೆ. ಒಬ್ಬರು ಕಾಮಕ್ರಿಯೆಯಲ್ಲಿ ಹೇಗೆ ವರ್ತಿಸುತ್ತಾರೆ (ಅಥವಾ ಇಲ್ಲ) ಎನ್ನುವುದರಿಂದ ಅವರು ನಿಜಜೀವನದಲ್ಲಿ ಹೇಗೆ ಬದುಕುತ್ತಾರೆ ಎನ್ನುವುದನ್ನು ತಿಳಿದುಕೊಳ್ಳಬಹುದು.

ಈ ಮಾತು ಸಲೀಲನಿಗೂ ಅನ್ವಯಿಸುತ್ತದೆ. ಅವನ ಶರೀರವು ಅವಳ ಶರೀರವನ್ನು ಬಯಸುತ್ತದೆಯೇ ಹೊರತು ಅವನು ಅವಳನ್ನಲ್ಲ. ಹಾಗಾಗಿಯೇ ಅವನು ಶಾರೀರಿಕ ಪರಿಪೂರ್ಣತೆಯ ಪರಿಕಲ್ಪನೆಯನ್ನು ತಲೆಯಲ್ಲಿ ಇಟ್ಟುಕೊಂಡಿದ್ದು, ಹಾಗಿರುವುದು ಕಷ್ಟಸಾಧ್ಯವೆಂದು ಅರಿವಾದರೂ ಲೆಕ್ಕಿಸದೆ ಆತಂಕ ಹೊಂದುತ್ತ, ಮತ್ತೆ ಮತ್ತೆ ಅದೇ ದಿಕ್ಕಿನಲ್ಲಿ ವ್ಯರ್ಥ ಪ್ರಯತ್ನ ಮಾಡುತ್ತ ತನಗೆ ತಾನೇ ಬೇಡವಾಗುತ್ತಿದ್ದಾನೆ. ಅದಕ್ಕೆಂದೇ ಶಾಮಾಳ ಜನನಾಂಗವು ತನ್ನ ಜನನಾಂಗಕ್ಕೆ ಸ್ಪಂದಿಸುವ ತನಕ ಕಾಯುತ್ತಾನೆ— ಅಷ್ಟೊತ್ತಿಗೆ ಅವನ ಶರೀರದ ಕಾರ್ಯಕ್ಷಮತೆ ಕೈಕೊಡುತ್ತದೆ. ಒಂದು ವೇಳೆ ಅವಳನ್ನು ಬಯಸುವ ಹಾಗಿದ್ದರೆ ಜನನಾಂಗಗಳನ್ನು ಪಕ್ಕಕ್ಕಿಟ್ಟು ಅವಳೊಡನೆ ಮಾತಾಡುತ್ತಿದ್ದ. ಅವಳ ಶರೀರವು ಸೊಬಗು ಉಳಿಸಿಕೊಂಡಿರುವುದನ್ನು ಕೂಟಕ್ಕೆ ಹೊರತಾದ ಸನ್ನಿವೇಶಗಳಲ್ಲಿ ಮೆಚ್ಚಿ ಮುಟ್ಟುತ್ತಿದ್ದ. ಅವಳ ಕಲ್ಪನೆಗಳನ್ನು ಕೇಳಿಸಿಕೊಳ್ಳುವುದರಲ್ಲಿ ಆಸಕ್ತಿ ತೋರಿಸುತ್ತಿದ್ದ. ಹೀಗೆ ದಾಂಪತ್ಯದಲ್ಲಿ ಅನ್ಯೋನ್ಯತೆ ಇಲ್ಲವೆಂದು ಅಂದುಕೊಳ್ಳುವ ಹೆಣ್ಣುಗಂಡುಗಳು ತಮ್ಮನ್ನು ತಾವೇ ಅನ್ಯೋನ್ಯತೆಯಿಂದ ಬಯಸಲಾಗದೆ ತಮ್ಮಷ್ಟಕ್ಕೆ ತಾವೇ ಪರಕೀಯರಾಗುತ್ತಾರೆ. ಪರಿಣಾಮವಾಗಿ, ತಾನು ಯಾರೆಂದು ಸಂಗಾತಿಯಿಂದ ಗುರುತಿಸಿಕೊಳ್ಳಲು ಕೂಟ ಬಯಸುತ್ತಾರೆ. ಅನ್ಯೋನ್ಯತೆಗೆ ಹುಡುಕಾಟ ಶುರುವಾಗುವುದು ಹೀಗೆ! ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.